ದಿನಾಂಕ: 31-01-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲು</u> : 2 <u>ನೇ ಪ್ರತಿವಾದಿ ಪರ ಮಾನ್ಯ ಎ.ಜಿ.ಪಿ ರವರಿಂದ ,</u>**

ನನ್ನ ತಂದೆಯ ಹೆಸರು ಲಿಂಗಪ್ಪ. ನನ್ನ ತಂದೆಗೆ ಆರು ಜನ ಮಕ್ಕಳು. ಅವರ ಹೆಸರು ಬಸವರಾಜಪ್ಪ, ಗುರುಲಿಂಗಪ್ಪ, ನಾನು, ನಾಗದೇವಪ್ಪ, ಶಿವಪ್ಪ ಮತ್ತು ನಾಗಪ್ಪ. 3 ಜನ ಹೆಣ್ಣು ಮಕ್ಕಳು ಅವರ ಹೆಸರು ಹುಚ್ಚಮ್ಮ, ಸೋಮಕ್ಕ ಮತ್ತು ಮಲಿಯಮ್ಮ. ನಮ್ಮ ಊರು ಕುರೆಕುಪ್ಪಾ ಗ್ರಾಮ. ನನ್ನ ಜಮೀನು ಸರ್ವೆ ನಂಃ417 ಮತ್ತು 418. ಸರ್ವೆ ನಂಃ417 ರ ವಿಸ್ತೀರ್ಣ 1 ಎಕರೆ 84 ಸೆಂಟ್ಸ್ ಇದ್ದು, 74 ಸೆಂಟ್ಸ್ ಭೂಸ್ವಾಧೀನ ಆಗಿದ್ದು ಈಗ ಪ್ರಸ್ತುತ 1 ಎಕರೆ 11 ಸೆಂಟ್ಸ್ ಇರುತ್ತದೆ. ಸರ್ವೆ ನಂಃ417 ರ ಚೆಕ್ ಬಂದಿ ಪೂರ್ವಕ್ಕೆಃ ರೈಲ್ವೆ ಹಳಿ, ಪಶ್ಚಿಮಕ್ಕೆಃ ಶಿವರಂಗಪ್ಪ ರವರ ಹೊಲ, ಉತ್ತರಕ್ಕೆಃಜಮೀನು ಸರ್ವೆ ನಂಃ418 ಮತ್ತು ದಕ್ಷಿಣಕ್ಕೆಃಮರಿಯಣ್ಣನವರ ವೀರನಗೌಡ ರವರ ಜಮೀನು.

ಜೀಂದಾಲ್ ಕಾರ್ಖಾನೆ ಪ್ರಾರಂಭವಾದಾಗ ನಮ್ಮ ಗ್ರಾಮದ ಜಮೀನುಗಳಿಗೆ 1 ಎಕರೆಗೆ ರೂ.10 ಲಕ್ಷ ಬೆಲೆ ಬಾಳುತ್ತಿತ್ತು. ಆ ಸಮಯದಲ್ಲಿ 1 ಎಕರೆಗೆ ರೂ.10 ಲಕ್ಷಕ್ಕೆ ಮಾರಾಟ ಮಾಡಿರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

ಭೂಸ್ವಾಧೀನ ಅಧಿಕಾರಿಗಳು ನನಗೆ ನೋಟಿಸ್ ನೀಡಿ ಸರ್ವೆ ನಂಃ417 ರಲ್ಲಿ 74 ಸೆಂಟ್ಸ್ ಸ್ವಾಧೀನ ಪಡೆಯುತ್ತಿದ್ದೆವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಅದೇ ರೀತಿಯಾಗಿ ಲೋಕದರ್ಶನ ಮತ್ತು ಹೋರಾಟ ಕನ್ನಡ ದಿನಪತ್ರಿಕೆಯಲ್ಲಿ ಸಹ ಭೂಸ್ವಾಧಿನದ ಬಗ್ಗೆ ಪ್ರಕಟಣೆ ಮಾಡಿದ್ದರು ಎಂದರೆ ಸರಿ. ಕುರೆಕುಪ್ಪಾ ಗ್ರಾಮದಲ್ಲಿ ಈ ಬಗ್ಗೆ ಡೋಗುರ ಸಹ ಮಾಡಿರಸಿರುತ್ತಾರೆ ಎಂದರೆ ಸರಿ. ಗ್ರಾಮ ಪಂಚಾಯತ್ ಆವರಣದಲ್ಲಿ ಸಹ ಅದರ ಬಗ್ಗೆ ಅಂಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು

ಭೂಸ್ವಾಧೀನ ಅಧಿಕಾರಿಗಳು ಕೊಟ್ಟಂತಹ ಪರಿಹಾರವನ್ನು ನಮಗೆ ಒಪ್ಪಿಗೆ ಇಲ್ಲ ಎಂದು 2 ನೇ ಪ್ರತಿವಾದಿ ರವರ ಮುಂದೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

1993-94 ರಲ್ಲಿ ಬನ್ನಿಹಟ್ಟಿ ಗ್ರಾಮದ ಸರ್ವೆ ನಂಃ183 ವಿಸ್ತೀರ್ಣ 1 ಎಕರೆ 75 ಸೆಂಟ್ಸ್ ಜಮೀನಿಗೆ ಕ್ರಯದ ಮೋತ್ತ ರೂ.15 ಸಾವಿರಗೆ ಖರೀದಿ ಆಗಿರುತ್ತದೆ ಎಂದರೆ ಸಾಕ್ಷಿಯು ಕ್ರಯ ಪತ್ರದಲ್ಲಿ ಅಷ್ಟು ಹಣ ತೋರಿಸಿರುತ್ತಾರೆ ಆದರೆ ಹೆಚ್ಚಿನ ಬೆಲೆಗೆ ಮಾರಾಟ ಆಗಿರುತ್ತದೆ ಎಂದು ನುಡಿಯುತ್ತಾರೆ.

1994 ರಲ್ಲಿ ಕುರೆಕುಪ್ಪಾ ಗ್ರಾಮದ ಸರ್ವೆ ನಂಃ425 ವಿಸ್ತೀರ್ಣ 3 ಎಕರೆ 15 ಸೆಂಟ್ಸ್ ಜಮೀನಿಗೆ ಕ್ರಯದ ಮೋತ್ತ ರೂ.28 ಸಾವಿರಗೆ ಖರೀದಿ ಆಗಿರುತ್ತದೆ ಎಂದರೆ ಸರಿ.

ನಾನು 2 ನೇ ಪ್ರತಿವಾದಿಯ ಕಚೇರಿಗೆ 1 ಎಕರೆಗೆ ರೂ.9 ಸಾವಿರ ನೀಡಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಮ್ಮ ಜಮೀನು ಭೂಸ್ವಾಧೀನ ಪಡೆಸಿಕೊಂಡು ನನಗೆ ಬರುವಂತಹ ಹಣವನ್ನು ಭೂಸ್ವಾಧೀನ ಅಧಿಕಾರಿಗಳು ಠೇವಣಿಯಾಗಿ ಇಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಸರ್ಕಾರಿ ಯೋಜನೆಗಳ ಅಡ್ಡಿಪಡೆಸಲು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.